**<u>ದಿನಾಂಕಃ 19.12.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲು : ಪ್ರತಿವಾದಿಗಳ ಪರ ಶ್ರೀ ಎಬಿಕೆ ವಕೀಲರಿಂದಃ</u>**

1) ನಾನು ದ್ವಿತೀಯ ಪಿಯುಸಿವರೆಗೂ ವಿದ್ಯಾಭ್ಯಾಸ ಮಾಡಿದ್ದೇನೆ. ದಾವೆಯನ್ನು ಸಲ್ಲಿಸಲು ವಕೀಲರಿಗೆ ನಾನೇ ಮಾಹಿತಿ ನೀಡಿದ್ದೆ. ಪ್ರತಿವಾದಿಗಳು ಸಲ್ಲಿಸಿರುವ ತಕರಾರಿನ ಸಂಗತಿಗಳನ್ನು ತಿಳಿದುಕೊಂಡಿದ್ದೇನೆ. ನನ್ನ ತಂದೆಯ ಜೀವಿತ ಕಾಲದಲ್ಲಿಯೇ ನಮ್ಮ ಕುಟುಂಬದಲ್ಲಿ ವಿಭಾಗ ಆಗಿತ್ತು. ಯಾವ ವರ್ಷದಲ್ಲಿ ವಿಭಾಗ ಆಗಿತ್ತು ಎಂದು ನನಗೆ ಗೊತ್ತಿಲ್ಲ. ನನ್ನ ತಂದೆ 2004ನೇ ಸಾಲಿನಲ್ಲಿ ಮೃತಪಟ್ಟಿರುತ್ತಾರೆ. ವಿಭಾಗ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ದಾವಾ ಸ್ವತ್ತು ನನ್ನ ತಂದೆಯ ಹೆಸರಿನಲ್ಲಿ ಇತ್ತು ಎಂದು ತೋರಿಸಲು ಖಾತೆ ಪ್ರತಿಯನ್ನು ಹಾಜರುಪಡಿಸಿರುತ್ತೇನೆ. ನಾನು ಅಂತಹ ಯಾವುದೇ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ.

2) 2 ರಿಂದ 4ನೇ ಪ್ರತಿವಾದಿಗಳು ನನ್ನ ಚಿಕ್ಕಪ್ಪನ ಮಕ್ಕಳು. 1ನೇ ಪ್ರತಿವಾದಿ ನನ್ನ ಚಿಕ್ಕಮ್ಮ. ನನ್ನ ತಾತ ಜವರಯ್ಯ. ಅವರಿಗೆ ಒಟ್ಟು ಆರು ಜನ ಮಕ್ಕಳು. ಅವರೆಂದರೆ ವೆಂಕಟಪ್ಪ, ವರದಯ್ಯ, ಜೆ ವರದಯ್ಯ, ಕುಳ್ಳಯ್ಯ ಅಲಿಯಾಸ್ ಮಾಯಣ್ಣ, ಚಿಕ್ಕೋನು ಮತ್ತು ಹುಚ್ಚಯ್ಯ. ನನ್ನ ತಾತನಿಗೆ ಅಬ್ಬೂರು ಗ್ರಾಮದಲ್ಲಿ ಒಟ್ಟು ಮೂರು ಸ್ವತ್ತುಗಳು ಇದ್ದವು. ಅವುಗಳ ಪೈಕಿ ಮೊದಲನೇ ಸ್ವತ್ತಿನ ಖಾನೇಷುಮಾರಿ ನಂ.326, 2ನೇಯದು ಖಾನೇಷುಮಾರಿ ನಂ.317 ಮತ್ತು 3ನೇಯದು ಖಾನೇಷುಮಾರಿ ನಂ.356 ಎಂದರೆ ಸರಿ. ಸದರಿ ಮೂರು ಸ್ವತ್ತುಗಳಿಗೆ ಸಂಬಂಧಿಸಿದಂತೆ ನನ್ನ ತಂದೆಯ ಜೀವಿತ ಕಾಲದಲ್ಲಿ ಈ ಪ್ರಕರಣದಲ್ಲಿನ ಪ್ರತಿವಾದಿಗಳು ವಿಭಾಗ ಕೋರಿ ಇದೆ ನ್ಯಾಯಾಲಯದಲ್ಲಿ ಅಸಲು ದಾವಾ ಸಂಖ್ಯೆ.68/2001ರಂತೆ ಪ್ರಕರಣ ದಾಖಲಿಸಿದ್ದರು ಎಂದರೆ ಸರಿ. ಸದರಿ ದಾವೆಯು ದಿ 08.01.2008ರಂದು ಡಿಕ್ರಿ ಆಗಿದೆ ಎಂದರೆ ಸರಿ. ಅಸಲು ದಾವಾ ಸಂಖ್ಯೆ.68/2001 ರ ಪ್ರಕರಣ ಚಾಲ್ತಿಯಲ್ಲಿ ಇರುವಾಗಲೇ ನನ್ನ ತಂದೆ ಮೃತಪಟ್ಟಿದ್ದರು ಎಂದರೆ ಸರಿ. ತದ ನಂತರ ಸದರಿ ಪ್ರಕರಣದಲ್ಲಿ ನನ್ನ ತಂದೆಯ

ವಾರಸುದಾರರಾದ ನನ್ನ ತಾಯಿ ಶಿವಲಿಂಗಮ್ಮ, ನನ್ನ ಸಹೋದರರಾದ ಚಿಕ್ಕರಾಜು, ನಾರಾಯಣ, ನಾನು, ನನ್ನ ಸಹೋದರಿ ಮಾಯಮ್ಮ ಮತ್ತು ವರಲಕ್ಷ್ಮಿ ಎಲ್ಲರೂ ಆ ಪ್ರಕರಣದಲ್ಲಿ ಪಕ್ಷಗಾರರಾಗಿ ಸೇರ್ಪಡೆಗೊಂಡಿದ್ದೇವು ಎಂದರೆ ಸರಿ.

3) ನನ್ನ ಚಿಕ್ಕಪ್ಪನಾದ ಜೆ ವರದಯ್ಯ ಮೃತಪಟ್ಟಿರುತ್ತಾರೆ. ನನ್ನ ತಂದೆಯ ಎಲ್ಲಾ ಸಹೋದರರು ಅಸಲು ದಾವಾ ಸಂಖ್ಯೆ 68/2001ರ ಪ್ರಕರಣದಲ್ಲಿ ಪಕ್ಷಗಾರರಾಗಿದ್ದರು ಎಂದರೆ ಸರಿ. ಅಸಲು ದಾವಾ ಸಂಖ್ಯೆ 68/2001ರ ಪ್ರಕರಣದಲ್ಲಿ ಆದ ಪ್ರಾಥಮಿಕ ಡಿಕ್ರಿಯ ಮೇರೆಗೆ ಆ ಪ್ರಕರಣದಲ್ಲಿನ ಪಕ್ಷಗಾರರಾಗಿದ್ದ ಅಂದರೆ ಪ್ರಸ್ತುತ ಪ್ರಕರಣದಲ್ಲಿನ ಪ್ರತಿವಾದಿಗಳು ಅಂತಿಮ ಡಿಕ್ರಿ ಪಡೆಯಲು ಇದೇ ನ್ಯಾಯಾಲಯದಲ್ಲಿ ಅರ್ಜಿಯನ್ನು ಸಲ್ಲಿಸಿದ್ದರು ಎಂಬ ಬಗ್ಗೆ ನನಗೆ ಗೊತ್ತಿಲ್ಲ. ಆ ಪ್ರಕರಣದಲ್ಲಿ ನಾನು ಹಾಜರಾಗಿರಲಿಲ್ಲ. **ಸಾಕ್ಷಿಯು ಎಫ್.ಡಿ.ಪಿ. 2/2009ರ ಪ್ರಕರಣದಲ್ಲಿ ನ್ಯಾಯಾಲಯದ ನಿಯೋಗಿ ಸಲ್ಲಿಸಿರುವ ಮಹಜರ್ ನಲ್ಲಿ ಇರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಸದರಿ ಮಹಜರ್ ಒಳಗೊಂಡ ಎಫ್.ಡಿ.ಪಿ. ಸಂಖ್ಯೆ.2/2009ರ ಪ್ರಕರಣದ ಆದೇಶ ಪುಟದ ದೃಢೀಕೃತ ಪ್ರತಿ ಮತ್ತು ಅಸಲು ದಾವಾ ಸಂಖ್ಯೆ.68/2001ರ ಪ್ರಾಥಮಿಕ ಡಿಕ್ರಿಯ ದೃಢೀಕೃತ ಪ್ರತಿ ಹಾಗೂ ನಕಾಶೆಗಳೊಂದಿಗೆ ಮಹಜರ್ ನ್ನು ಒಟ್ಟಾಗಿ ನಿಡಿ-1 ಎಂದು ಗುರುತಿಸಲಾಯಿತು. ನಿಡಿ-1ರಲ್ಲಿ ಇರುವ ಮಹಜರ್ ನ ಮೇಲಿನ ತನ್ನ ಸಹಿಯನ್ನು ಸಾಕ್ಷಿಯು ನೋಡಿ ಗುರುತಿಸಿದ ಕಾರಣ ಸಾಕ್ಷಿಯ ಸಹಿಯನ್ನು ನಿಡಿ-1ಎ ಎಂದು ಗುರುತಿಸಲಾಯಿತು.**

4) ನಿಡಿ-1ರಲ್ಲಿ ನಮೂದು ಮಾಡಿರುವ ಖಾನೇಷುಮಾರಿ ನಂ.326, 317 ಮತ್ತು 356ರ ಆಸ್ತಿಗಳಿಗೆ ಸಂಬಂಧಿಸಿದಂತೆ ಆಯುಕ್ತರು ನ್ಯಾಯಾಲಯದ ಆದೇಶದ ಮೇರೆಗೆ ಅಳತೆ ಮಾಡಿ ವಿಭಾಗವನ್ನು ತೋರಿಸಿ ನಕಾಶೆಯನ್ನು ತಯಾರಿಸಿ ನ್ಯಾಯಾಲಯಕ್ಕೆ ಸಲ್ಲಿಸಿದ್ದರು ಎಂದರೆ ಸರಿ. ಎಫ್ ಡಿ ಪಿ 02/2009ರ ಪ್ರಕರಣದಲ್ಲಿ ಇದೇ ನ್ಯಾಯಾಲಯದಲ್ಲಿ ದಿ 16.01.2012ರಂದು ಅಂತಿಮ ಡಿಕ್ರಿಯನ್ನು ಹೊರಡಿಸಿದೆ ಎಂಬ ಬಗ್ಗೆ ನನಗೆ ಗೊತ್ತಿಲ್ಲ.

5) ಪ್ರತಿವಾದಿಗಳ ಹೆಸರಿಗೆ ದಾವಾ ಸ್ವತ್ತಿನ ಖಾತೆ ಆಗಿರುವುದಿಲ್ಲ. ಖಾನೇಷುಮಾರಿ ನಂ.326ರ ಖಾತೆಯು 2ನೇ ಪ್ರತಿವಾದಿಯ ಹೆಸರಿನಲ್ಲಿ ಇರುತ್ತದೆ. ನನ್ನ ಚಿಕ್ಕಪ್ಪನ ಹೆಂಡತಿಯಾದ ಅಮ್ಮಾಣ್ಣಮ್ಮ ಮತ್ತು ಈ ದಾವೆಯಲ್ಲಿನ

ಪ್ರತಿವಾದಿಗಳ ನಡುವೆ ಖಾನೇಷುಮಾರಿ ನಂ.326 ಆಸ್ತಿಯು ವಿಭಾಗ ಆಗಿರುತ್ತದೆ ಎಂದರೆ ಸರಿ. ಖಾನೇಷುಮಾರಿ ನಂ.317ರ ಆಸ್ತಿಯಲ್ಲಿ ನಮ್ಮ ಮತ್ತು ನನ್ನ ಚಿಕ್ಕಪ್ಪನಾದ ವರದಯ್ಯನ ಮಕ್ಕಳ ನಡುವೆ ವಿಭಾಗ ಆಗಿದೆ ಎಂದರೆ ಸರಿ. ಖಾನೇಷುಮಾರಿ ನಂ.356ರ ಆಸ್ತಿಯಲ್ಲಿ ಹುಚ್ಚಯ್ಯ ಮತ್ತು ಜೆ ವರದಯ್ಯನ ಕುಟುಂಬದವರ ನಡುವೆ ವಿಭಾಗ ಆಗಿದೆ ಎಂದರೆ ಸರಿ. ಎಫ್ ಡಿ ಪಿ 2/2009ರ ಆದೇಶದ ಮೇರೆಗೆ 5ನೇ ಪ್ರತಿವಾದಿಯು ಖಾತೆಗಳನ್ನು ಬದಲಾವಣೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಎಫ್ ಡಿ ಪಿ 2/2009ರ ಪ್ರಕರಣದ ಅಂತಿಮ ತೀರ್ಪು ಮತ್ತು ಅದರ ಮೇರೆಗೆ 5ನೇ ಪ್ರತಿವಾದಿಯು ಖಾತೆಗಳನ್ನು ಬದಲಾವಣೆ ಮಾಡಿರುವ ವಿಚಾರಗಳು ತಿಳಿದಿದ್ದರು ಸಹ ನಾನು ಪ್ರತಿವಾದಿಗಳಿಗೆ ತೊಂದರೆ ಕೊಡಲು ಸುಳ್ಳು ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ.

6) ಈ ಪ್ರಸ್ತುತ ಪ್ರಕರಣದಲ್ಲಿ ನಾನು ಈ ಹಿಂದೆ ನಮ್ಮ ಮತ್ತು ಪ್ರತಿವಾದಿಗಳ ನಡುವೆ ನ್ಯಾಯಾಲಯದಲ್ಲಿ ನಡೆದಿದ್ದ ಪ್ರಕರಣಗಳ ಬಗ್ಗೆ ತಿಳಿಸಿರುತ್ತೇನೆ. ಅಂತಹ ಯಾವುದೇ ಸಂಗತಿಗಳನ್ನು ವಾದಪತ್ರದಲ್ಲಿ ನಮೂದು ಮಾಡಿಲ್ಲ ಎಂದರೆ ಸರಿಯಲ್ಲ. ಅಸಲು ದಾವಾ ಸಂಖ್ಯೆ 68/2001ರ ಪ್ರಕರಣ ದಾಖಲಿಸುವ ಪೂರ್ವದಲ್ಲಿ ದಾವಾ ಸ್ವತ್ತು ಒಳಗೊಂಡಂತೆ ಕುಟುಂಬದ ಇತರೆ ಸ್ವತ್ತುಗಳನ್ನು ನನ್ನ ತಂದೆ ಮತ್ತು ಆತನ ಸಹೋದರರ ನಡುವೆ ನಾನು ಹೇಳಿದಂತೆ ಯಾವುದೇ ರೀತಿ ವಿಭಾಗ ಆಗಿರಲಿಲ್ಲ ಎಂದರೆ ಸರಿಯಲ್ಲ. 1 ರಿಂದ 4ನೇ ಪ್ರತಿವಾದಿಗಳಿಗೆ ಯಾವುದೇ ಸ್ವಂತ ಮನೆ ಇರುವುದಿಲ್ಲ ಎಂದರೆ ಸರಿಯಲ್ಲ. ಅವರಿಗೆ ಅಬ್ಬೂರು ಗ್ರಾಮದಲ್ಲಿ ಯಾವುದೇ ಸ್ವಂತ ಮನೆ ಇರುವುದಿಲ್ಲ. 2ನೇ ಪ್ರತಿವಾದಿ ಚನ್ನಪಟ್ಟಣದಲ್ಲಿ ಆಟೋ ಚಾಲನೆ ವೃತ್ತಿ ಮಾಡುತ್ತಾ ಬಾಡಿಗೆ ಮನೆ ಮಾಡಿಕೊಂಡು ವಾಸ ಇರುತ್ತಾರೆ ಎಂದರೆ ಸರಿ. 1 ರಿಂದ 4ನೇ ಪ್ರತಿವಾದಿಗಳು ನ್ಯಾಯಾಲಯದಿಂದ ತಮ್ಮ ಪರವಾಗಿ ಭಾಗ ಬಂದ ಆಸ್ತಿಯಲ್ಲಿ ತಾವು ತಮ್ಮ ಜಾಗದಲ್ಲಿ ಮನೆ ಕಟ್ಟಲು ಮುಂದಾದಾಗ ನಾನು ಅವರಿಗೆ ತೊಂದರೆ ಕೊಡಲು ಈ ದಾವೆಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

7) ಖಾನೇಷುಮಾರಿ ನಂ.317ರ ಆಸ್ತಿಯಲ್ಲಿ ನನಗೆ ಭಾಗ ಬಂದಿದ್ದರು ಸಹ ಪ್ರತಿವಾದಿಗಳಿಗೆ ತೊಂದರೆ ಕೊಡಲು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ಯಾವುದೇ ರೀತಿಯ ದಾಖಲೆಗಳನ್ನು ನಾನು ನ್ಯಾಯಾಲಯಕ್ಕೆ ಸಲ್ಲಿಸಿಲ್ಲ ಎಂದರೆ ಸರಿಯಲ್ಲ.

ದಾವಾ ಸ್ವತ್ತು 1 ರಿಂದ 4ನೇ ಪ್ರತಿವಾದಿಗಳಿಗೆ ಸೇರಿದ ಸ್ವತ್ತಾಗಿದ್ದು ಆ ಸ್ವತ್ತಿನ ಮೇಲೆ ನಮಗೆ ಯಾವುದೇ ಹಕ್ಕು ಮತ್ತು ಅಧಿಕಾರ ಇರುವುದಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ : ಇಲ್ಲ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕೀಕರಣ ಮಾಡಲಾಯಿತು).**

ಓ. ಹೆ. ಕೇ. ಸರಿ ಇದೆ.

**ಪ್ರಧಾನ ದಿವಾಣಿ ಹಾಗೂ ಪ್ರ.ದ.ನ್ಯಾ. ದಂ.ಗಳ ನ್ಯಾಯಾಲಯ, ಚನ್ನಪಟ್ಟಣ.**